ಮೀಟಿಂಗು ಅಟೆಂಡ್ ಮಾಡಿ ನಿಮ್ಮ ಒಂದು ಗಂಟೆ ಅವಧಿಯ ಟ್ರೀಟ್‌ನಲ್ಲಿ ಪಾಲ್ಗೊಳ್ಳುತ್ತೇವೆ' ಎಂಬ ಒಕ್ಕಣೆಯಿರುವ ಅದರ ಕೆಳಗಡೆ ಸಹಿ ಹಾಕಲು ಹೇಳಿದ. ವಿಶ್ವನಾಥ ಓದಿಕೊಂಡು 'ಟ್ರೀಟು ದೊಡ್ಡದೇ ಇರಬೇಕು' ಮನಸ್ಸಿನಲ್ಲೇ ಲೆಕ್ಕ ಹಾಕುತ್ತ ಸಹಿ ಹಾಕಿದ. 'ಇವಳದೂ ಸಹಿ ಬೇಕೋ?' ಕೇಳಿದಕ್ಕೆ ಆ ಯುವಕ, 'ಇರಲಿ ಬೇಡ, ನಿಮ್ಮದು ಸಾಕು, ಒಂದೇ ಫ್ಯಾಮಿಲಿ ಅಲ್ವೇ' ಅಂತ ಸಣ್ಣಗೆ ನಗುತ್ತ ಒಳಹೋಗಿದ್ದ. ಆಗ ಅಲ್ಲಿಂದಲೇ ಒಂದು ಸುಂದರವಾದ ಹುಡುಗಿ ಹೊರಬಂದು ಮತ್ತೆ 'ಹಾಯ್ ಸರ್, ಹಲೋ ಮ್ಯಾಡಂ' ಹೇಳುತ್ತ ಎದುರು ಕುರ್ಚಿಯಲ್ಲಿ ಕೂತು 'ಹತ್ತು ನಿಮಿಷ ಅಷ್ಟೇ, ಒಂದು ಸೆಷನ್ ಇದೀಗ ಮುಗೀತು, ನೆಕ್ಸ್ಟ್ ನೀವೇ' ಅಂದಳು. ಆಯ್ತು ಎನ್ನುತ್ತ ವಿಶ್ವನಾಥ ಹೆಂಡತಿಯ ಮುಖ ನೋಡಿದ. ನಸುನಗುವಿನ ಆ ಯುವತಿ ಕೂಡ ಯುವಕರ ಶೈಲಿಯ ಅಂಥದೇ ಸಮವಸ್ತ್ರ ತೊಟ್ಟಿದ್ದಳು.

'ಮ್ಯಾಡಂ ಏನು ಸರ್ವಿಸ್‌ನಲ್ಲಿದ್ದೀರಾ?' ಅಂತ ಅವಳು ಮಂಜುಳೆಯೊಂದಿಗೆ ಮಾತಿಗಾರಂಭಿಸಿದಾಗ ವಿಶ್ವನಾಥ ಕೋಣೆಯಲ್ಲೆಲ್ಲ ಕಣ್ಣಾಡಿಸುತ್ತ ಕುಳಿತಿದ್ದ, ಎಲ್ಲೆಡೆ ಸುಮ್ಮಸುಮ್ಮನೇ ವಿದ್ಯುದ್ದೀಪಗಳು ಉರಿಯುತ್ತಿದ್ದವು. ಅದೇಕೆ ಈ ರೀತಿ ಲೈಟ್‌ಗಳನ್ನೆಲ್ಲ ಹಚ್ಚಿಡುತ್ತೀರಿ ಅಂತ ಅವನಿಗೆ ಆ ಕ್ಷಣ ಕೇಳಿಯೇ ಬಿಡಬೇಕೆನಿಸಿದರೂ ಅಲ್ಲೇ ಸುಮ್ಮನಾದ. ಮಂಜುಳಾ 'ನಾನು ನೌಕರಿ ಇಲ್ಲ, ಇವರು ಮಾಡುತ್ತಾರೆ, ನಾನು ಮನೆಯಲ್ಲೇ ಪ್ರೈಮರಿಯವರಿಗೆ ಟ್ಯೂಷನ್ನು ಕೊಡುತ್ತೇನೆ' ಎಂತೇನೋ ಹೇಳುತ್ತಿದ್ದುದಕ್ಕೆ, 'ಇರಲಿ ಬಿಡಿ , ನಾನು ಮನೆಯಲ್ಲೇ ಅಂತ ಸಣ್ಣ ಮುಖ ಮಾಡಿ ಯಾಕೆ ಹೇಳುತ್ತೀರಿ? ಅವರಿಗೆ ಸರ್ವಿಸ್ ಮಾಡಲು ಶಕ್ತಿ, ನಿಮ್ಮ ಅಡುಗೆ ಮನೆಯಿಂದಲೇ ಹೋಗಬೇಕಲ್ಲವೇ?' ಅಂತೇನೋ ಸಮಜಾಯಿಸಿಕೊಡುತ್ತಿದ್ದಳು. ಆಗ ಮಂಜುಳೆಯೇ 'ಯಾಕೆ ನೀವು ಇಷ್ಟೆಲ್ಲ ಲೈಟುಗಳನ್ನು ಅದೂ ಹಗಲಿನ ವೇಳೆಯಲ್ಲಿ ಹಚ್ಚಿಟ್ಟಿದ್ದೀರಿ?' ಅಂತ ಕೇಳಿಯೇ ಬಿಟ್ಟಿದ್ದಳು. ಆ ತರುಣಿ ಅದೇ ನಸುನಗುವಿನಲ್ಲೇ 'ಸೋಲಾರ್ ಸಿಸ್ಟಮ್ ಇದೆ ಮ್ಯಾಡಂ, ಜಾಸ್ತಿ ಎಲೆಕ್ಟ್ರಿಸಿಟಿ ಬಿಲ್ ಬರುವುದಿಲ್ಲ, ನಿಮ್ಮ ಹಾಗೆ ಗಿಫ್ಟ್ ಪಡೆಯಲು ನೂರಾರು ಜನ ಬರ್ತಾರೆ, ಅವರನ್ನು ಹೇಗೆ ಕತ್ತಲಲ್ಲಿ ಕೂಡಿಸುವುದು?' ವಿಶ್ವನಾಥನ ಕಿವಿ ಇದ್ದಲ್ಲೇ ನಿಚ್ಚಳವಾಗಿತ್ತು. ಆಗಲೇ ಗೊತ್ತಾದದ್ದು ಅವನಿಗೆ ತಮ್ಮಂತೆಯೇ ಇನ್ನೂ ತುಂಬ ಜನ ಗೆಸ್ಟ್ ಬರುವವರಿದ್ದಾರೆ ಎಂದು. 'ಎಲ್ಲಿ ನಡೀತದೆ ಫಂಕ್ಷನ್?' ಅಂತ ಕಣ್ಣರಳಿಸಿದ ಮಂಜುಳಾಗೆ 'ಇಲ್ಲೇ ಪಕ್ಕದ ಅಡಿಟೋರಿಯಂನಲ್ಲಿ' ಎಂದಳು. ಸಂಭಾಷಣೆ ಹೀಗೆ ಸಾಗಿದ್ದಾಗಲೇ ಗ್ಲಾಸಿನಲ್ಲಿ ಆರೇಂಜ್ ಜ್ಯೂಸ್ ಬಂತು. ವಿಶ್ವನಾಥ ಕುಡಿದ, ಮಂಜುಳಾ ತನಗೆ ಶೀತ ಅನ್ನುತ್ತ ನಿರಾಕರಿಸಿದ್ದಳು.

'ಫಂಕ್ಷನ್‌ಗೆ ಗೆಸ್ಟ್ ಯಾರು ಬರುತ್ತಾರೆ?' ಅಂತ ಯಾವುದೋ ಲಹರಿಯಲ್ಲಿ ವಿಶ್ವನಾಥ ಆ ತರುಣಿಯೆಡೆ ತಿರುಗಿ ಕೇಳಿಯೇ ಬಿಟ್ಟ. 'ನಮ್ಮ ಕಂಪೆನಿಯ ಚೇರ್ ಪರ್ಸನ್ ಇರ್ತಾರೆ, ನಿಮ್ಮ ಹಾಗೆ ಗಿಫ್ಟ್ ಪ್ಯಾಕ್ ಪಡೆದ ಇನ್ನೂ ಇಪ್ಪತ್ತು ಜನ ಬಂದಿರುತ್ತಾರೆ.' 'ಓಹ್ ಹಾಗಾದರೆ ಇನ್ನೂ ಇಪ್ಪತ್ತು ಜನರಿಗೆ ಗಿಫ್ಟ್ ಬಂದಿದೆಯೇ?' 'ಹೌದು, ಅವರೆಲ್ಲ ಬರುತ್ತಾರೆ, ನೀವೂ ಅವರೆಲ್ಲರ ಪರಿಚಯ ಮಾಡಿಕೊಳ್ಳಬಹುದು. ನೋಡಿ ಈ ರೀತಿಯ ಫಂಕ್ಷನ್‌ನಲ್ಲಿ ಪಾಲ್ಗೊಳ್ಳುವುದರಿಂದ ಬೇರೆ ಬೇರೆ ಜನರ ಪರಿಚಯ ಆಗ್ತದೆ, ಮತ್ತು ಯೋಚನೆಗಳು ಎಕ್ಸ್‌ಪಾಂಡ್ ಆಗ್ತವೆ, ಮತ್ತು ಬೇರೆ ಬೇರೆ ನಾಲೇಡ್ಜ್ ಬರ್ತದೆ' ಅಂತೆಲ್ಲ ತನಗೆ ಕಂಪೆನಿ ಕಲಿಸಿದ ವಿದ್ಯೆಯನ್ನು ಹೊರಹಾಕತೊಡಗಿದಳು. ಅಷ್ಟರಲ್ಲಿ ಇನ್ನೊಂದು ಜೋಡಿ ಬಂತು. ಅವರೂ ಎಂಥದೋ ಅಪರಿಮಿತ ಸಂಭ್ರಮದಲ್ಲಿಂತೆ ಕಂಡರು ವಿಶ್ವನಾಥನಿಗೆ. ಅವರಿಗೂ ಥೇಟು ಇದೇ ರೀತಿಯ ಆತಿಥ್ಯ.